ದಿನಾಂಕಃ 15.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ವಾದಿ ಪರ ಎಸ್. ಬಿ. ಹೆಚ್ ವಕೀಲರಿಂದಃ</u>**

ನಾನು ಶಾಲೆ ಕಲಿತಿಲ್ಲ. ನನಗೆ ಕನ್ನಡ ಓದಲು- ಬರೆಯಲು ಬರುವುದಿಲ್ಲ. ಸುಮಾರು 15 ವರ್ಷಗಳಿಂದ ನಾನು ಕನ್ನಡ ಭಾಷೆಯಲ್ಲಿ ಸಹಿ ಹಾಕುತ್ತಿದ್ದೇನೆ. ಪ್ರಸ್ತುತ ದಾವೆಯನ್ನು 1 ವಾದಿ ಮಹಾದೇವಿ ಮೂರು ಜನರ ಮೇಲೆ ಹೂಡಿರುತ್ತಾಳೆ. ಯಾರ ಮೇಲೆ ಹೂಡಿರುತ್ತಾಳೆಂದರೆ ಚಂದ್ರಯ್ಯ, ಅಡಿವೆಯ್ಯಾ ಮತ್ತು ಪ್ರೇಮಾರವರ ಮೇಲೆ ಹಾಕಿರುತ್ತಾಳೆ. ಮೂರು ಆಸ್ತಿಗಳಿಗೆ ಸಂಬಂಧಿಸಿದಂತೆ ದಾವೆ ಹೂಡಿರುತ್ತಾಳೆ. ಚಂದ್ರಯ್ಯ ಅಂದರೆ ನನ್ನ ಜಮೀನು ಸರ್ವೆ ನಂಬರ 406/1 ಕ್ಷೇತ್ರ 02 ಎಕರೆ ಇರುತ್ತದೆ. ಅದರ ಚಕ್ಕುಬಂದಿ ಪೂರ್ವಕ್ಕೆ -ಇಟ್ನಾಳರವರ ಜಮೀನು, ಪಶ್ಚಿಮಕ್ಕೆ -ಸದಾಶಿವ ದುಂಡಯ್ಯ ಹಿರೇಮಠರವರ ಜಮೀನು, ದಕ್ಷಿಣಕ್ಕೆ-ಸರಕಾರಿ ಗುಡ್ಡ ಹಾಗೂ ಉತ್ತರಕ್ಕೆ- ಹಳ್ಳ ಇರುತ್ತದೆ.

ಅಡಿವೆಯ್ಯಾ ಸಿದ್ರಾಮಯ್ಯ ಹಿರೇಮಠರವರಿಗೆ 02 ಎಕರೆ ಜಮೀನು ಇರುತ್ತದೆ. ಅದರ ಸರ್ವೆ ನಂಬರ 406/4 ಇದ್ದು, ಕ್ಷೇತ್ರ 02 ಎಕರೆ 02 ಗುಂಟೆ ಜಮೀನು ಇರುತ್ತದೆ. ಅದರ ಚಕ್ಕುಬಂದಿ ಪೂರ್ವಕ್ಕೆ -ಇಟ್ನಾಳರವರ ಜಮೀನು, ಪಶ್ಚಿಮಕ್ಕೆ -ಸದರೀ ಅಡಿವೆಯ್ಯಾರವರಜಮೀನು, ದಕ್ಷಿಣಕ್ಕೆ- ಗುಡ್ಡ ಹಾಗೂ ಉತ್ತರಕ್ಕೆ- ನಮ್ಮ ಜಮೀನು ಇರುತ್ತದೆ.

ವಾದಿಯರು ದಾವಾ ಆಸ್ತಿಗಳಲ್ಲಿ ಪಾಲು ಬೇಕು ಎಂದು ಕೇಳಿ ದಾವೆಯನ್ನು ಸಲ್ಲಿಸಿರುತ್ತಾರೆ. ನನ್ನ ಪ್ರತಿವಾದ ಪತ್ರಕ್ಕೆ ಹಾಗೂ ಮುಖ್ಯ ವಿಚಾರಣೆಯ ಸಾಕ್ಷಿ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಪ್ರತಿವಾದಿ ನಂ.9 ರಿಂದ 11ರವರು ತಮ್ಮ ಪರವಾಗಿ ನನಗೆ ಸಾಕ್ಷ್ಯ ನುಡಿಯಲು ಅಧಿಕಾರ ಪತ್ರ ಕೊಟ್ಟಿರುತ್ತಾರೆ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. 1 ನೇ ವಾದಿಯು ತನ್ನ ಪರವಾಗಿ ಹಾಜರುಪಡಿಸಿದ

ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಮ್ಮ ವಕೀಲರ ಮೂಲಕ ಆ ಬಗ್ಗೆ ತಿಳಿದುಕೊಂಡಿರುತ್ತೀರಾ? ಎಂದರೆ ಸಾಕ್ಷಿಯು ನಾವು ಜಮೀನನ್ನು ಖರೀದಿಸುವ ಕಾಲಕ್ಕೆ ವಾದಿಯರು ಗಂಡನ ಮನೆಯಲ್ಲಿ ವಾಸ ಇದ್ದು, ಈಗ ಆಸ್ತಿಯಲ್ಲಿ ಪಾಲು ಬೇಕೆಂದು ದಾವೆ ಹೂಡಿರುತ್ತಾರೆಂದು ನುಡಿಯುತ್ತಾರೆ. ವಾದಿಯರು ಹಾಜರುಪಡಿಸಿದ ದಾಖಲೆಗಳ ಬಗ್ಗೆ ನಾನು ವಕೀಲರಿಂದ ಕೇಳಿ ತಿಳಿದುಕೊಂಡಿಲ್ಲ.

ವಾದಿಯರ ಮೂಲ ಪುರುಷ ರಾಮಯ್ಯನ ತಂದೆಯ ಹೆಸರು ಬಸಯ್ಯ . ಸದರಿ ಬಸಯ್ಯನ ತಂದೆಯ ಹೆಸರು ಚನ್ನಯ್ಯ. ಚನ್ನಯ್ಯನಿಗೆ ಒಟ್ಟು 08 ಜನ ಗಂಡುಮಕ್ಕಳು ಎಂದರೆ ನಿಜ. 1. ಸಿದ್ಧಯ್ಯಾ, 2. ಬಸಯ್ಯ, 3. ರುದ್ರಯ್ಯಾ, 4. ಅಡಿವೆಯ್ಯಾ, 5. ವೀರಭದ್ರಯ್ಯಾ ಉರ್ಫ ಈರಯ್ಯಾ, 6. ಗುರುಪಾದಯ್ಯಾ, 7.ಬಾಳಯ್ಯಾ ಹಾಗೂ 8. ಶಿವಯ್ಯಾ ಇರುತ್ತಾರೆಂದರೆ ನಿಜ. ನಮ್ಮ ಅಜ್ಜ ರುದ್ರಯ್ಯ ಹಾಗೂ ವಾದಿಯರ ಮೂಲ ಪುರುಷ ರಾಮಯ್ಯನ ತಂದೆ ಬಸಯ್ಯಾ ಅಣ್ಣತಮ್ಮಂದಿರರು ಇರುತ್ತಾರೆಂದರೆ ನಿಜ.

ವಾದಿಯರ ಮೂಲಪುರುಷ ರಾಮಯ್ಯ ಯಾವಾಗ ತೀರಿಕೊಂಡಿರುತ್ತಾನೆಂದು ನನಗೆ ಹೇಳಲು ಆಗುವುದಿಲ್ಲ ಆದರೆ ನಾನು 5-6 ವರ್ಷ ವಯಸ್ಸಿ ನವ ನು ಇರಬಹುದು. ಸದರಿ ರಾಮಯ್ಯನ ಹೆಂಡತಿಯ ಹೆಸರು ತಂಗೆವ್ವ ಎಂದರೆ ನಿಜ. ಸದರಿಯವರಿಗೆ 04 ಜನ ಹೆಣ್ಣುಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು ಎಂದರೆ ನಿಜ. 1. ಶಂಕ್ರಯ್ಯಾ, 2. ಕಾಶವ್ವಾ, 3. ದೇವೇಂದ್ರಯ್ಯಾ ,4. ಸುಶೀಲವ್ವ, 5. ಗಂಗವ್ವ, 6. ಮಹಾದೇವಿ ಇರುತ್ತಾರೆಂದರೆ ನಿಜ. ಅವರ ಪೈಕಿ ಶಂಕ್ರಯ್ಯ ತೀರಿಕೊಂಡಿರುತ್ತಾರೆಂದರೆ ನಿಜ. ಅವನ ಹೆಂಡತಿಯ ಹೆಸರು ಭದ್ರವ್ವ. ಸಾಕ್ಷಿ ಮುಂದುವರೆದು ಅವಳು ಸಹ ಈಗ ಸುಮಾರು 10 ವರ್ಷಗಳ ಹಿಂದೆ

ತೀರಿಕೊಂಡಿರುತ್ತಾಳೆಂದು ನುಡಿಯುತ್ತಾರೆ. ಅವರಿಗೆ ಒಬ್ಬನೇ ಮಗ ರಾಮಯ್ಯಾ ಇದ್ದು, ಆತನು ಸಹ ಮದುವೆಯಾಗದೇ ತೀರಿಕೊಂಡಿರುತ್ತಾನೆಂದರೆ ನಿಜ. ಅದೇ ರೀತಿ ಮೇಲೆ ಹೇಳಿದ ದೇವೆಂದ್ರಯ್ಯಾ ಸಹ ತೀರಿಕೊಂಡಿರುತ್ತಾನೆಂದರೆ ನಿಜ. ದೇವೆಂದ್ರಯ್ಯಾನ ಹೆಂಡತಿ ಗಂಗವ್ವ ಸಹ ತೀರಿಕೊಂಡಿರುತ್ತಾಳೆಂದರೆ ಸಾಕ್ಷಿಯು ಅವಳು ಬದುಕಿದ್ದಾಳೆ ಆದರೆ ಎಲ್ಲಿ ವಾಸ ಇರುತ್ತಾಳೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರೀಯವರಿಗೆ ಇಬ್ಬರು ಮಕ್ಕಳು ಅಂದರೆ 1. ಅಣ್ಣವ್ವ ಮತ್ತು 2. ಮಹಾದೇವಿ ಇರುತ್ತಾರೆಂದರೆ ನಿಜ. ಪ್ರತಿವಾದ ಪತ್ರ ಸಲ್ಲಿಸುವ ಪೂರ್ವದಲ್ಲಿ ದೇವೆಂದ್ರಯ್ಯಾನ ಹೆಂಡತಿ ಗಂಗವ್ವ ಬದುಕಿದ್ದ ಬಗ್ಗೆ ನಮಗೆ ಮಾಹಿತಿ ಇತ್ತು. ಸದರಿ ಸಂಗತಿಯನ್ನು ವಕೀಲರಿಗೆ ತಿಳಿಸಿರುತ್ತೇವೆ. ಸದರಿ ಗಂಗವ್ವ ಬದುಕಿದ್ದ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಾಗಲೀ, ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಾಗಲೀ ಹೇಳಿರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಅವಳು ಎಲ್ಲಿ ಇರುತ್ತಾಳೆಂದು ಪತ್ತೆ ಇರುವುದಿಲ್ಲ ಆದ್ದರಿಂದ ಸದರಿ ಸಂಗತಿಯನ್ನು ನನ್ನ ಪ್ರತಿವಾದ ಪತ್ರದಲ್ಲಾಗಲಿ , ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಾಗಲೀ ಹೇಳಿರುವುದಿಲ್ಲ.

ವಾದಿಯರ ಮೂಲ ಪುರುಷ ರಾಮಯ್ಯನು ದಿ.29.06.1967 ರಂದು ತೀರಿಕೊಂಡಿರುತ್ತಾನೆಂದರೆ ನನಗೆ ಗೊತ್ತಿಲ್ಲ. ರಾಮಯ್ಯನ ತಂದೆ ಬಸಯ್ಯನು ದಿ. 02.12.1974 ರಂದು ತೀರಿಕೊಂಡಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಸನ್ 1974 ರಲ್ಲಿ ನನಗೆ 03 ವರ್ಷ ವಯಸ್ಸು ಇರಬಹುದು. ರಾಮಯ್ಯನ ಮೊದಲನೇ ಮಗ ಶಂಕ್ರಯ್ಯಾ ದಿ. 01.08.1986 ರಲ್ಲಿ ತೀರಿಕೊಂಡಿರುತ್ತಾನೆಂದರೆ ಇರಬಹುದು.

ದಾವಾ ಆಸ್ತಿಗಳು ವಾದಿಯರಿಗೆ ತಮ್ಮ ಪೂರ್ವಜರಿಂದ ಬಂದ ಆಸ್ತಿಗಳು ಇರುತ್ತವೆ ಎಂದರೆ ನಿಜ. ರಾಮಯ್ಯ ಬದುಕಿದ್ದಾಗ ಆತನ ಮಕ್ಕಳ ಮದ್ಯೆ ವಾಟ್ನಿಯಾಗಿರುವುದಿಲ್ಲ ಎಂದರೆ ನಿಜ. ರಾಮಯ್ಯ ತೀರಿಕೊಂಡ ನಂತರವೂ ಸಹ ಆತನ ಎಲ್ಲಾ ಮಕ್ಕಳ ಮದ್ಯೆ ವಾಟ್ನಿ ಯಾಗಿರುವುದಿಲ್ಲ ಎಂದರೆ ನಿಜ. ಆದ್ದರಿಂದ

ರಾಮಯ್ಯನ ಆಸ್ತಿಯಲ್ಲಿ ಆತನ ಎಲ್ಲಾ ಮಕ್ಕಳಿಗೂ ಸಹ ಹಕ್ಕು ಇರುತ್ತದೆಂದರೆ ಸಾಕ್ಷಿಯು ಗಂಡು ಮಕ್ಕಳು ಮಾತ್ರ ವಾರಸಾ ಮಾಡಿಕೊಂಡಿದ್ದು, ಹೆಣ್ಣು ಮಕ್ಕಳು ವಾರಸಾ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಅ.ಕ್ರ.ಸಂ.2, ಸರ್ವೆ ನಂಬರ 406/1 ನೇದ್ದನ್ನು ಈಗ 40 ವರ್ಷಗಳ ಹಿಂದೆ ಖರೀದಿಸಿರುತ್ತೇವೆ. ನನಗೆ ನಿಖರವಾಗಿ ದಿನಾಂಕ ಹೇಳಲು ಆಗುವುದಿಲ್ಲ. ಸದರಿ ಜಮೀನನ್ನು ಖರೀದಿಸುವಾಗ ನನ್ನ ವಯಸ್ಸು 20 ವರ್ಷ ಇರಬಹುದು. ಆ ಸಮಯದಲ್ಲಿ ಏನೇನು ಕಾಗದ ಪತ್ರಗಳನ್ನು ನೋಡಿರುತ್ತೀರಿ? ಎಂದರೆ ಸಾಕ್ಷಿಯು ದೇವೆಂದ್ರಯ್ಯನ ಹೆಸರಿಗೆ ಸದರಿ ಜಮೀನು ದಾಖಲೆ ಇದ್ದು, ಆತನು ತನ್ನ ಮನೆಯ ಅಡಚಣೆಯ ಸಲುವಾಗಿ ಮಾರಾಟ ಮಾಡುತ್ತೇನೆಂದು ಹೇಳಿದ್ದರಿಂದ ನಾವು ಸದರಿ ಜಮೀನನ್ನು ಖರೀದಿಸಿರುತ್ತೇವೆ. ಸದರಿ ಜಮೀನಿನ ಹಳೆಯ ಪಹಣಿಪತ್ರಿಕೆಗಳು, ಮ್ಯುಟೇಶನ್ ಮತ್ತು ಋಣಭಾರ ಪ್ರಮಾಣಪತ್ರಗಳನ್ನು ತೆಗೆಸಿ ನೋಡಿರುವುದಿಲ್ಲ. ಸದರಿ ದಾಖಲೆಗಳನ್ನು ಪಡೆದುಕೊಂಡು ಪರೀಶಿಲನೆ ಮಾಡಲು ತೊಂದರೆ ಇರಲಿಲ್ಲ ಎಂದರೆ ನಿಜ. ಸದರಿ ಜಮೀನನ್ನು ಮಾರಾಟ ಮಾಡುತ್ತೇನೆಂದು ದೇವೆಂದ್ರಯ್ಯಾನೇ ಹೇಳಿರುತ್ತಾನೆ. ಆ ಸಮಯದಲ್ಲಿ ನಾನು ಹಾಗೂ ನನ್ನ ತಂದೆ ಇದ್ದೆವು. ಸದರಿ ಜಮೀನನ್ನು ಖರೀದಿಸುತ್ತಿರುವ ಬಗ್ಗೆ ದೇವೆಂದ್ರಯ್ಯನ ಸಹೋದರ-ಸಹೋದರಿಯರನ್ನು ವಿಚಾರಿಸಿರುವುದಿಲ್ಲ ಏಕೆಂದರೆ ಸದರಿ ಜಮೀನು ಆತನ ಹೆಸರಿನಲ್ಲಿ ಮಾತ್ರ ಇತ್ತು ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಖರೀದಿಸುತ್ತಿರುವ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿರುವುದಿಲ್ಲ. ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲು ತೊಂದರೆ ಇರಲಿಲ್ಲ. ಸದರಿ ಜಮೀನಿನ ಖರೀದಿ ಪತ್ರಕ್ಕೆ ದೇವೆಂದ್ರಯ್ಯನನ್ನು ಹೊರತುಪಡಿಸಿ ಆತನ ಸಹೋದರ - ಸಹೋದರಿಯರು ಯಾರು ಸಹಿ ಮಾಡಿರುವುದಿಲ್ಲ. ಅದೇ ರೀತಿ ಖರೀದಿ

ಮೊತ್ತವನ್ನು ಅವರಿಗೆ ಯಾರಿಗೂ ಕೊಟ್ಟಿರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ದೇವೆಂದ್ರಯ್ಯನಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ರೂ. 8 ಸಾವಿರಗಳನ್ನು ದೇವೆಂದ್ರಯ್ಯನಿಗೆ ಕೊಟ್ಟಿರುತ್ತೇವೆ. ಸದರಿ ಹಣವು ನಮ್ಮ ಕೃಷಿ ಉತ್ಪನ್ನದಿಂದ ಬಂದ ಹಣದಿಂದ ಕೊಟ್ಟಿರುತ್ತೇವೆ. ಸದರಿ ಖರೀದಿ ಪತ್ರಕ್ಕೆ ದೇವೆಂದ್ರಯ್ಯನ ಸಹೋದರ ಸಹೋದರಿಯರ ಸಹಿಗಳನ್ನು ಪಡೆಯಲು ತೊಂದರೆ ಇರಲಿಲ್ಲ.

ಸದರಿ ದೇವೆಂದ್ರಯ್ಯ ಆಸ್ಪತ್ರೆಯ ಖರ್ಚಿಗಾಗಿ ಮೇಲೆ ಹೇಳಿದ ಜಮೀನನ್ನು ನಮಗೆ ಮಾರಾಟ ಮಾಡಿರುತ್ತಾನೆ. ಆತನು ಅನಾರೋಗ್ಯದಿಂದ ಬಳಲುತ್ತಿದ್ದನು. ಸದರೀ ಸಂಗತಿಯನ್ನು ಪ್ರತಿವಾದಪತ್ರದಲ್ಲಾಗಲೀ ಅಥವಾ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಾಗಲೀ ಹೇಳಿ ಬರೆಸಿಲ್ಲ.

ಸದರಿ ಮೇಲೆ ಹೇಳಿದ ಸರ್ವೆ ನಂಬರ 406/1 ರಲ್ಲಿ ಒಂದು ಬಾಂವಿ ಇರುತ್ತದೆಂದರೆ ನಿಜ. ನಾವು ಸದರಿ ಜಮೀನನ್ನು ಖರೀದಿಸುವುದಕ್ಕಿಂತ ಮುಂಚೆಯೇ ಸದರಿ ಬಾವಿಯನ್ನು ತೋಡಿದ್ದರು ಎಂದರೆ ನಿಜ. ಸದರಿ ಬಾಂವಿಯ ನೀರಿನಿಂದ ಜಮೀನಿಗೆ ನೀರಾವರಿ ಮಾಡಿದ್ದರು ಎಂದರೆ ನಿಜ. ಸದರಿ ಜಮಿನಿನಲ್ಲಿ ನಾವು ಖರೀದಿಸುವುದಕ್ಕಿಂತ ಮುಂಚೆಯೇ ನೀರಾವರಿ ಬೆಳೆಗಳನ್ನು ಬೆಳೆಯುತ್ತಿದ್ದರು ಎಂದರೆ ಸಾಕ್ಷಿಯು ಗೋವಿನ ಜೋಳ, ಬೆಳೆಯುತ್ತಿದ್ದು ಅಷ್ಟೊಂದು ನೀರಿನ ಸೌಲಭ್ಯ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನಿಂದ ಅವರಿಗೆ ಸಾಕಷ್ಟು ಆದಾಯ ಇತ್ತು ಎಂದರೆ ಸರಿಯಲ್ಲ. ಆದ್ದರಿಂದ ಅವರಿಗೆ ಯಾವುದೇ ಹಣಕಾಸಿನ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದೇವೆಂದ್ರಯ್ಯನು ಶಾಲೆ ಕಲಿತಿರಲಿಲ್ಲ ಎಂದರೆ ನಿಜ. ಆತನಿಗೆ ಓದಲು ಬರೆಯಲು ಬರುತ್ತಿರಲಿಲ್ಲ ಎಂದರೆ ನಿಜ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

Sd/-
(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ